**ಓ.ಎಸ್. ನಂ. 74/2020** **ಪಿ.ಡಬ್ಲ್ಯೂ- 1**

**<u>ಸಾಕ್ಷಿಯನ್ನು ದಿನಾಂಕ 6.7.2023 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.</u>**

ಪಾಟೀ ಸವಾಲುಃ ಪ್ರತಿವಾದಿ 1 ರಿಂದ 3 ನೇ ಪ್ರತಿವಾದಿ ಪರ ವಕೀಲರು ಗೈರುಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿ 4 ರಿಂದ 11 ಪರ ಶ್ರೀ ಡಿ.ಆರ್.ಎಂ ವಕೀಲರಿಂದಃ</u>

ನಾನು ಯಾವ ಸರ್ವೆ ನಂಬರ್ ಆಸ್ತಿಗೆ ದಾವೆ ದಾಖಲಿರುತ್ತೇನೆ ಮತ್ತು ಯಾವ ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ ಎಂಬ ಬಗ್ಗೆ ತಿಳಿದುಕೊಂಡಿರುತ್ತೇನೆ. ನಾನು ಉಳಿದ ಎಲ್ಲಾ ವಾದಿಯರ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ. ನನ್ನ ತಾಯಿಯ ಹೆಸರು ಅಕ್ಕಾಜಮ್ಮ ಆಗಿರುತ್ತದೆ. ನನ್ನ ತಾಯಿ ಅಕ್ಕಾಜಮ್ಮರವರ ಮರಣ ಪ್ರಮಾಣಪತ್ರವನ್ನು ಹಾಜರುಪಡಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಂದೆ ಎಂದು ಹೇಳುವ ತಿರುಮಲೇಗೌಡರವರ ಮರಣ ಪ್ರಮಾಣಪತ್ರವನ್ನು ಹಾಜರುಪಡಿಸಿರುವುದಿಲ್ಲ. ಅಕ್ಕಾಜಮ್ಮರವರು ತಿರುಮಲೇಗೌಡರನ್ನು ಮದುವೆಯಾಗಿರುವ ಬಗ್ಗೆ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ. ಅಕ್ಕಾಜಮ್ಮ ಮತ್ತು ತಿರುಮಲೇಗೌಡರು ಒಟ್ಟಿಗೆ ವಾಸವಾಗಿದ್ದ ಬಗ್ಗೆ ಚುನಾವಣಾ ಗುರುತಿನ ಚೀಟಿ ಮತ್ತು ಮತದಾರರ ಪಟ್ಟಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಅಕ್ಕಾಜಮ್ಮ ರವರು ತಿರುಮಲೇಗೌಡರನ್ನು ಮದುವೆಯಾಗಿರುವ ಬಗ್ಗೆ ಮತ್ತು ವಾದಿಯರು ಅವರ ಮಕ್ಕಳು ಎಂದು ತೋರಿಸಲು ತಹಶೀಲ್ದಾರ್‌ರವರಿಂದ ವಂಶವೃಕ್ಷವನ್ನು ಪಡೆದು ನ್ಯಾಯಾಲಯಕ್ಕೆ ನೀಡಿರುವುದಿಲ್ಲ. ದಾವಪತ್ರದಲ್ಲಿ ವಂಶವೃಕ್ಷವನ್ನು ಬರೆಸಿರುವುದಿಲ್ಲ ಎಂದರೆ ಸಾಕ್ಷಿದಾರರು ಬರೆಸಿರುತ್ತೇನೆ ಎನ್ನುವರು. ನನ್ನ ತಂದೆ ತಾಯಿ ಮತ್ತು ನಾವು ಒಟ್ಟಿಗೆ ವಾಸವಿದ್ದ ಬಗ್ಗೆ ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ತಿರುಮಲೇಗೌಡರ ತಂದೆಯ ಹೆಸರು ಗೋವಿಂದೇಗೌಡ ಆಗಿರುತ್ತದೆ. ತಿರುಮಲೇಗೌಡರ ತಾತನ ಹೆಸರು ಗೊತ್ತಿರುವುದಿಲ್ಲ. ನನ್ನ ತಂದೆ ಎಂದು ಹೇಳುವ ತಿರುಮಲೇಗೌಡರವರನ್ನು ಗೋವಿಂದೇಗೌಡರು ದತ್ತು ತೆಗೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ತಿರುಮಲೇಗೌಡರ ತಂದೆಯ ಹೆಸರು ಗೋವಿಂದೇಗೌಡ ಎಂಬುದು ಸುಳ್ಳು, ಅವರ ತಂದೆಯ ಹೆಸರು ದನ ವೆಂಕಟೇಗೌಡ ಎಂದರೆ ಸಾಕ್ಷಿದಾರರು ಇದ್ದರು ಇರಬಹುದು ಎನ್ನುವರು. ನನ್ನ ತಾಯಿ ಅಕ್ಕಾಜಮ್ಮ ರವರು ತಿರುಮಲೇಗೌಡರನ್ನು ಮದುವೆಯಾಗಿರುವುದು ಸುಳ್ಳು ಮತ್ತು ವಾದಿಯರು ಅವರ ಮಕ್ಕಳು ಎಂಬುದು ಸುಳ್ಳು ಎಂದರೆ ಸರಿಯಲ್ಲ. ತಿರುಮಲೇಗೌಡರು ತಿಮ್ಮಮ್ಮರವರನ್ನು ಮಾತ್ರ ಮದುವೆಯಾಗಿದ್ದು, ಅಕ್ಕಾಜಮ್ಮರವರನ್ನು ಮದುವೆಯಾಗಿರುವುದಿಲ್ಲ ಎಂದರೆ ಸರಿಯಲ್ಲ. ತಿರುಮಲೇಗೌಡರು ಜಿ.ಬಿ.ಸರಗೂರು ಗ್ರಾಮದಲ್ಲಿ ತೀರಿಕೊಳ್ಳುವವರಗೂ ವಾಸವಾಗಿದ್ದರು. ಜಿ.ಬಿ.ಸರಗೂರು ಗ್ರಾಮದಲ್ಲಿ ನಾವು ತಿರುಮಲೇಗೌಡರ ಜೊತೆ ವಾಸವಾಗಿದ್ದ ಬಗ್ಗೆ ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರುಪಡಿಸಿರುವ ಬಗ್ಗೆ ಗೊತ್ತಿರುವುದಿಲ್ಲ.

ತಿರುಮಲೇಗೌಡರವರಿಗೆ ಸಂಬಂಧಪಟ್ಟ ಮನೆಗಳು ಮತ್ತು ಆಸ್ತಿ ಜಿ.ಬಿ.ಸರಗೂರು ಗ್ರಾಮದಲ್ಲಿದೆ. ಜಿ.ಬಿ.ಸರಗೂರು ಗ್ರಾಮದಲ್ಲಿ ತಿರುಮಲೇಗೌಡರಿಗೆ ಸಂಬಂಧಪಟ್ಟ ಹಳೇ ಮತ್ತು ಹೊಸ ಮನೆಗಳು ಇರುತ್ತದೆ ಎಂದರೆ ಸರಿ. ಸದರಿ ಹಳೇ ಮನೆ ಮತ್ತು ಹೊಸ ಮನೆಯನ್ನು ಈ ದಾವೆಯಲ್ಲಿ ಸೇರಿಸಿರುತ್ತೀರಾ ಎಂದರೆ ಹೊಸ ಮನೆ ಸೇರಿಸಿರುತ್ತೇನೆ, ಊರಿನಲ್ಲಿರುವ ಆಸ್ತಿಗಳನ್ನು ಮತ್ತು ಒಂದು ಸೈಟನ್ನು ಸೇರಿಸಿರುತ್ತೇನೆ ಎನ್ನುವರು. ದಾವಪತ್ರದಲ್ಲಿ ಯಾವುದೇ ಮನೆಯನ್ನು ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. 2 ಮತ್ತು 3 ನೇ ಪ್ರತಿವಾದಿಯರು ಮನೆ ಕಟ್ಟಿಕೊಂಡು ವಾಸವಾಗಿರುತ್ತಾರೆ ಎಂದರೆ ಸಾಕ್ಷಿದಾರರು ಹಳೇ ಮನೆಯಲ್ಲಿ ವಾಸವಿರುತ್ತಾರೆ ಎನ್ನುವರು. ಸದರಿ ಹಳೇ ಮನೆಯನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ದಾವಆಸ್ತಿಗಳನ್ನು ಹೊರತುಪಡಿಸಿ ಪಾಲು ಆಗುವ ಬೇರೆ ಆಸ್ತಿಗಳು ಇರುವುದಿಲ್ಲ. ನಾನು ಮತ್ತು 1 ರಿಂದ 3 ನೇ ಪ್ರತಿವಾದಿಯರು ಚನ್ನಾಗಿದ್ದೆವು ಎಂದರೆ ಸರಿ.

4 ಮತ್ತು 5 ನೇ ಪ್ರತಿವಾದಿಯರು ಮನೆ ಕಟ್ಟಲು ದಾವಆಸ್ತಿಗಳಲ್ಲಿ ಸೈಟು ರೂಪದಲ್ಲಿ ಅದನ್ನು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅವರು 20-30 ವರ್ಷಗಳ ಹಿಂದೆಯೇ ಸೈಟನ್ನು ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿದಾರರು 3 ವರ್ಷದ ಹಿಂದೆ ಸೈಟು ಖರೀದಿ ಮಾಡಿರುವ ವಿಚಾರ ಗೊತ್ತಾಗಿರುತ್ತದೆ ಎನ್ನುವರು. 4 ಮತ್ತು 5 ನೇ ಪ್ರತಿವಾದಿಯರು ಸೈಟು ಖರೀದಿ ಮಾಡಿರುವ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿರುತ್ತೀರಾ ಎಂದರೆ ಸೈಟು ಖರೀದಿ ಮಾಡಿದ ವಿಚಾರ ಇತ್ತೀಚೆಗೆ ಗೊತ್ತಾಗಿರುತ್ತದೆ ಎನ್ನುವರು. ಸೈಟು ಖರೀದಿ ಮಾಡಿದ ವಿಚಾರ ಗೊತ್ತಾದ ನಂತರ 4 ಮತ್ತು 5 ನೇ ಪ್ರತಿವಾದಿಯ ಹೆಸರಿನಲ್ಲಿರುವ ಖಾತೆಯನ್ನು ಪ್ರಶ್ನಿಸಿ ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ. ನನ್ನ ತಾಯಿ ತಿರುಮಲೇಗೌಡರನ್ನು ಮದುವೆಯಾಗಿರುವುದಿಲ್ಲ, ವಾದಿಯರು ತಿರುಮಲೇಗೌಡರ ಮಕ್ಕಳಾಗದೇ ಇರುವ ಕಾರಣ ದಾವಆಸ್ತಿಗಳಲ್ಲಿ ನಮಗೆ ಪಾಲು ಕೇಳುವ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. 1 ರಿಂದ 3 ನೇ ಪ್ರತಿವಾದಿಯರು ಅವರಿಗೆ ಸಂಬಂಧಪಟ್ಟ ಆಸ್ತಿಯನ್ನು ಅವರ ಕುಟುಂಬದ ಅವಶ್ಯಕತೆಗೋಸ್ಕರ ಮಾರಾಟ ಮಾಡಿದ್ದು, ಅದನ್ನು ಪ್ರಶ್ನಿಸುವ ಹಕ್ಕು ನಮಗೆ ಇರುವುದಿಲ್ಲ ಎಂದರೆ ಸರಿಯಲ್ಲ. 1 ರಿಂದ 3 ನೇ ಪ್ರತಿವಾದಿಯರ ಜೊತೆ ಶಾಮೀಲಾಗಿ ಉದ್ದೇಶಪೂರ್ವಕವಾಗಿ ನಿಪಿ13 ರಂತೆ 1 ರಿಂದ 3 ನೇ ಪ್ರತಿವಾದಿಯರಿಗೆ ಮಾತ್ರ ನೋಟಿಸ್ ನೀಡಿ, ಆಸ್ತಿಯನ್ನು ಖರೀದಿ ಮಾಡಿದವರಿಗೆ ನೋಟಿಸ್ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿ ನೋಟಿಸ್ ನೀಡಿದ ನಂತರ ವಾದಿ ಮತ್ತು 1 ರಿಂದ 3 ನೇ ಪ್ರತಿವಾದಿಯರು ಸೇರಿ ನಿಪಿ20 ರಂತೆ ಉದ್ದೇಶಪೂರ್ವಕವಾಗಿ ಇನ್ನೊಬ್ಬ ವಕೀಲರ ಮೂಲಕ ಪ್ರತ್ಯುತ್ತರ ನೀಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ 4 ರಿಂದ 11 ರವರಿಂದ ಲಾಭ ಪಡೆಯಲು ನಿಪಿ12 ಮತ್ತು ನಿಪಿ20 ನ್ನು ನಾನು ಮತ್ತು 1 ರಿಂದ 3 ನೇ ಪ್ರತಿವಾದಿ ಸೇರಿ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಗೊಲ್ಲನಬೀಡು ಗ್ರಾಮದ ಸರ್ವೆ ನಂ.89/11 ರ 4 ಗುಂಟೆ ಆಸ್ತಿಯು 2 ಮತ್ತು 3 ನೇ ಪ್ರತಿವಾದಿಯರ ಹೆಸರಿನಲ್ಲಿದ್ದು ಅವರು ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸಾಕ್ಷಿದಾರರು ಗೊಲ್ಲನಬೀಡು ಗ್ರಾಮದಲ್ಲಿ ಜಮೀನು

ಇರುವುದಿಲ್ಲ ಎನ್ನುವರು.  ದಾವಆಸ್ತಿಗೆ ಸಂಬಂಧಿಸಿದಂತೆ ನನ್ನ ತಂದೆ ಹೆಸರಿನಲ್ಲಿರುವ ಮತ್ತು ನನ್ನ ತಂದೆಯ ತಂದೆ ಹೆಸನಲ್ಲಿರುವ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಖರೀದಿ ಮಾಡಿರುವವರ ಹೆಸರಿನಲ್ಲಿರುವ ಪಹಣಿಯನ್ನು ಮಾತ್ರ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ದಾವಆಸ್ತಿಗಳು ಹೇಗೆ ಬಂದಿರುತ್ತದೆ ಎಂದು ತೋರಿಸಲು ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಆಸ್ತಿಗಳು ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿರುತ್ತೇನೆ. ನಿಪಿ6 ಮತ್ತು ನಿಪಿ7 ರಲ್ಲಿ ಹೇಳಿರುವ ಆಸ್ತಿಗಳನ್ನು ಬ್ಯಾಂಕಿಗೆ ಆಧಾರ ಮಾಡಲಾಗಿರುತ್ತದೆ ಮತ್ತು ಬ್ಯಾಂಕಿನವರನ್ನು ಪಕ್ಷಗಾರರಾಗಿ ಮಾಡಿರುತ್ತೀರಾ ಎಂದರೆ ಸಾಕ್ಷಿದಾರರು ಆ ಬಗ್ಗೆ ಗೊತ್ತಿರುವುದಿಲ್ಲ ಎನ್ನುವರು.  ದಾವಆಸ್ತಿಗಳಲ್ಲಿ ನಮಗೆ ಯಾವುದೆ ಹಕ್ಕು ಇರದಿದ್ದರೂ ಸಹ ನ್ಯಾಯಾಲಯಕ್ಕೆ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.